-- **CC No**. 260/2013 **PW**-1

**ಸಾಕ್ಷಿಯನ್ನು ದಿಃ 04.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ ಜೆ ಡಿ ವಕೀಲರಿಂದಃ**

1ನೇ ಅರೋಪಿ ದಿಃ 06.11.2012 ರಂದು ನನ್ನ ವಿರುದ್ದ ದೂರು ನೀಡಿದ್ದರು ಎಂದರೆ ಸರಿ. ಸದರಿ ದೂರನ ಅನ್ವಯ ಸಿಸಿ ಸಂಖ್ಯೆ 289/2013 ರಂತೆ ಪ್ರಕರಣ ದಾಖಲಾತಿ ಜಾಮೀನು ಪಡೆದಿದ್ದೇವೆ ಎಂದರೆ ಸರಿ. ನಾನು 1ನೇ ಆರೋಪಿಗೆ ಚಾಕುವಿನಿಂದ ಚುಚ್ಚಿ ಹಲ್ಲೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ವಿರುದ್ದ ದೂರು ನೀಡಿದ್ದರ ಪ್ರತೀಕಾರವಾಗಿ ನಾನು ಈ ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರು ನನ್ನ ಮೇಲೆ ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನನ್ನು ಮು ಮಾ 1 ರಿಂದ 3 ಇವುಗಳಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. ಮು ಮಾ 1 ಮತ್ತು 2 ರ ದೊಣ್ಣೆಗಳು ಹಳ್ಳಿ ಕಡೆ ಸಿಗುತ್ತವೆ ಎಂದರೆ ಸರಿ. ಮು ಮಾ 3 ರ ಮಚ್ಚನ್ನು 2ನೇ ಆರೋಪಿ ತಂದಿರುತ್ತಾರೆ.

ನಾನು ವೈದ್ಯರೊಂದಿಗೆ ಷರೀಕಾಗಿ ಸುಳ್ಳು ಗಾಯದ ಪ್ರಮಾಣ ಪತ್ರ ಬರೆಸಿದ್ದೇನೆ ಎಂದರೆ ಸರಿಯಲ್ಲ. ಘಟನೆಯಲ್ಲಿ ಮು ಮಾ 1 ರಿಂದ 3 ಬಳಸಿಲ್ಲ ಎಂದರೆ ಸರಿಯಲ್ಲ. ನಾನೇ ಆರೋಪಿತರ ಮೇಲೆ ಹಲ್ಲೆ ಮಾಡಿದ್ದು, ಮು ಮಾ 1 ಮತ್ತು 3 ರಿಂದ ಆರೋಪಿತರು ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ.

ನಿಪಿ-1 ರ ಮಾಹಿತಿಯನ್ನು ಪೋಲೀಸರಿಗೆ ನಾನು ಹಾಸನದ ಎಸ್ ಎಸ್ ಎಂ ಆಸ್ಪತ್ರೆಯಲ್ಲಿ ನೀಡಿರುತ್ತೇನೆ. ನಿಪಿ-1 ರ ಹೇಳಿಕೆಯನ್ನು ಸಂಜೆ 4.00 ರಿಂದ 5.00

ಗಂಟೆಯವರೆಗೆ ನೀಡಿರುತ್ತೇನೆ. ನಾನು ಚನ್ನರಾಯಪಟ್ಟಣದಲ್ಲಿ ಪ್ರಥಮ ಚಿಕಿತ್ಸೆ ಪಡೆದಿರುತ್ತೇನೆ. ನನಗೆ ಸುಸ್ತು ಇದ್ದುದ್ದರಿಂದ ಚನ್ನರಾಯಪಟ್ಟಣದ ಆಸ್ಪತ್ರೆಯಲ್ಲಿ ಹೇಳಿಕೆ ನೀಡಿಲ್ಲ. ನನಗೆ ರಕ್ತಗಾಯವಾಗಿದ್ದು ಬಟ್ಟೆ ಸಹ ರಕ್ತವಾಗಿತ್ತು. ಸದರಿ ಬಟ್ಟೆಯನ್ನು ಪೋಲೀಸರಿಗೆ ನೀಡಿಲ್ಲ. ಮಹಜರ್ ನ್ನು ಆಸ್ಪತ್ರೆಯಲ್ಲಿ ಮಾಡಿರುತ್ತಾರೆ. ಮು ಮಾ 1 ರಿಂದ 3 ನ್ನು ವಿಶೇಷವಾದ ಗುರುತು ಇಟ್ಟುಕೊಂಡಿದ್ದೀರ ಎಂದರೆ ಸಾಕ್ಷಿ ವಿಶೇಷವಾದ ಗುರುತು ಎಂದರೆ ಏನು ಎಂದು ಅರ್ಥವಾಗುತ್ತಿಲ್ಲ. 3ನೇ ಆರೋಪಿ ನನ್ನ ಮರ್ಮಾಂಗಕ್ಕೆ ಹೊಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ–2 ರಿಂದ ಚಾಸಾ–4 ರವರು ನನ್ನ ಸಂಬಂಧಿಕರಲ್ಲ ಆದರೆ ನನ್ನ ಊರಿನವರು. ಆರೋಪಿತರ ವಿರುದ್ಧ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಕುಸುಮ ವಿ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**